# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,**
**ಬೃಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು**

ಸಂಖ್ಯೆ:ಸ.ಇಂ/ವಾ–144/ವಾರ್ಡ್ ಸಭೆ/2020–21 ದಿನಾಂಕ:06/02/2021

## ವಾರ್ಡ್ –144ರ ವಾರ್ಡ್ ಸಭೆಯ ನಡವಳಿ

ದಿನಾಂಕ:06/02/2021 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್–144ರ ವಾರ್ಡ್ ಕಛೇರಿಯಲ್ಲಿ (ದಕ್ಷಿಣ ವಲಯ) ವಾರ್ಡ್ 144–ಸಿದ್ದಾಪುರ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ನರಸರಾಮರಾವ್ | ಅಧೀಕ್ಷಕ ಅಭಿಯಂತರರು (ದಕ್ಷಿಣ ವಲಯ) | ಹಾಜರಿದ್ದರು |
| 2 | ಶ್ರೀ. ಆರ್. ಕೊಟ್ರೇಶ್‌ನಾಯಕ್ | ಸಹಾಯಕ ಅಭಿಯಂತರರು ವಾರ್ಡ್–144– ಸಿದ್ದಾಪುರ | ಹಾಜರಿದ್ದರು |
| 3 | ಶ್ರೀ. ವಿಜಯಕುಮಾರ್ | ಕಿರಿಯ ಅಭಿಯಂತರರು BESCOM | ಹಾಜರಿದ್ದರು |
| 4 | ಶ್ರೀ. ಸುನಿಲ್‌ಕುಮಾರ್ | ಸಹಾಯಕ ಅಭಿಯಂತರರು BWSSB | ಹಾಜರಿದ್ದರು |
| 5 | ಶ್ರೀ. ಆರ್. ರಾಘವೇಂದ್ರ | ಕಂದಾಯ ವಸೂಲಿಗಾರರು ಹೊಂಬೇಗೌಡನಗರ ಉಪವಿಭಾಗ | ಹಾಜರಿದ್ದರು |
| 6 | ಶ್ರೀ. ಉಮಾಶಂಕರ್ | ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ನಿರ್ವಹಣೆ | ಹಾಜರಿದ್ದರು |
| 7 | ಶ್ರೀ. ಜಿ. ಮೂರ್ತಿ | ಸಹಾಯಕ ಅಭಿಯಂತರರು ವಿದ್ಯುತ್ (ದ) | ಹಾಜರಿದ್ದರು |
| **ಕ್ರಮ ಸಂಖ್ಯೆ** | **ಮಾಜಿ ಸದಸ್ಯರ ಹೆಸರು** | **ಪದನಾಮ** | **ಹಾಜರಾತಿ** |
| 1 | ಶ್ರೀ. ಸಯ್ಯದ್ ಖಾಜಾ ನಿಜಾಮುದ್ದೀನ್ | ಮಾಜಿ ಸದಸ್ಯರು | ಹಾಜರಿದ್ದರು |

| ಕ್ರಮ ಸಂಖ್ಯೆ | ಸ್ಥಳೀಯರ ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀ. ಸುರೇಶ್ ಹೆಚ್.ಕೆ. | ಸ್ಥಳೀಯರು | ಹಾಜರಿದ್ದರು |
| 2 | ಶ್ರೀ. ಮಂಜುನಾಥ | ಸ್ಥಳೀಯರು | ಹಾಜರಿದ್ದರು |
| 3 | ಶ್ರೀ. ಅಶೋಕ್ ಜಿ. | ಸ್ಥಳೀಯರು | ಹಾಜರಿದ್ದರು |
| 4 | ಶ್ರೀ. ತೇಜಸ್ ಎ. ಗೌಡ | ಸ್ಥಳೀಯರು | ಹಾಜರಿದ್ದರು |

ಮ.ತಿ.ನೋ..



Scanned with CamScanner

| | | | |
|---|---|---|---|
| 5 | ಶ್ರೀ. ಸುಮಂತ್ ಎಸ್. | ಸ್ಥಳೀಯರು | ಹಾಜರಿದ್ದರು |
| 6 | ಶ್ರೀ. ಜಯರಾಮ್ ಎಂ.ಜಿ | ಸ್ಥಳೀಯರು | ಹಾಜರಿದ್ದರು |
| 7 | ಶ್ರೀ. ಸತೀಶ್ ಎಸ್. | ಸ್ಥಳೀಯರು | ಹಾಜರಿದ್ದರು |
| 8 | ಶ್ರೀ. ಕೆಂಪರಾಜು ಓ. | ಸ್ಥಳೀಯರು | ಹಾಜರಿದ್ದರು |

ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ಸದಸ್ಯರು ಮತ್ತು ಸ್ಥಳೀಯರು ಪರಸ್ಪರ ಪರಿಚಯದೊಂದಿಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

- ಸಭೆಯಲ್ಲಿ ಹಾಜರಿದ್ದ ಶ್ರೀ. ಜಯರಾಮ್ ಎಂ.ಜಿ ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾದ 6ನೇ ಅಡ್ಡರಸ್ತೆ, ಗುಟ್ಟೇಪಾಳ್ಯದಲ್ಲಿ ಬಾಗಿರುವ ಕಂಬವನ್ನು ತೆರವುಗೊಳಿಸಲು ಕೋರಿದ್ದರು. ಈ ದೂರಿನಲ್ಲಿ ಈಗಾಗಲೇ ಒಂದು ಭಾಗಿರುವ ಕಂಬವನ್ನು ಸರಿಪಡಿಸಿದ್ದು, ಇನ್ನೆರಡು ಬಾಕಿ ಇರುವುದಾಗಿ ತಿಳಿಸಿದರು ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಕಿರಿಯ ಅಭಿಯಂತರರಾದ ಶ್ರೀ. ವಿಜಯಕುಮಾರ್ ರವರು ಉತ್ತರಿಸಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಶ್ರೀ. ಜಯರಾಮ್ ಎಂ.ಜಿ ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾದ ಸಮತಾವಾದ ಶಾಲೆ ಎದುರು ವಾಹನಗಳನ್ನು ತೆರವುಗೊಳಿಸಲು ಮತ್ತೊಮ್ಮೆ ಕೋರಿದರು ಆದರೆ ಸಂಚಾರ ಪೋಲೀಸ್ ಅಧಿಕಾರಿಗಳು ಸಭೆಗೆ ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಶ್ರೀ. ಜಯರಾಮ್ ಎಂ.ಜಿ ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾದ ಶ್ರೀರಾಮ ದೇವಸ್ಥಾನದ ಹತ್ತಿರ ಹಾಗೂ ರಾಘವೇಂದ್ರ ಕಾಲೋನಿ ಮುಖ್ಯರಸ್ತೆಯಲ್ಲಿ BWSSB ವತಿಯಿಂದ ನಿರ್ಮಿಸಿರುವ ಚೇಂಬರ್‌ಗಳಲ್ಲಿ ಒಳಚರಂಡಿ ನೀರು ಉಕ್ಕಿ ಹರಿಯುತ್ತಿದ್ದು, ಹಾಗೂ ಸದರಿ ರಸ್ತೆಗಳಲ್ಲಿ ಒಳಚರಂಡಿ ಕೊಳವೆಗಳನ್ನು ಮತ್ತೊಮ್ಮೆ ಅಳವಡಿಸಲು ಕೋರಿದ್ದರು. ಇಂದಿನ ಸಭೆಯಲ್ಲಿ ಹಾಜರಿದ್ದ, BWSSB ಸಹಾಯಕ ಅಭಿಯಂತರರಾದ ಶ್ರೀ. ಸುನಿಲ್‌ಕುಮಾರ್ ರವರು ಮಾತನಾಡಿ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಅಧ್ಯಕ್ಷರಿಗೆ ಹಾಗೂ ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಶ್ರೀ. ಜಯರಾಮ್ ಎಂ.ಜಿ ರವರು ಮಾತನಾಡಿ ಚೇಂಬರ್‌ನಿಂದ ತೆಗೆದು ಮಧ್ಯ ರಸ್ತೆಗೆ ಹಾಕಿರುವ ಮಣ್ಣನ್ನು ತೆರವುಗೊಳಿಸಲು ಕೋರಿದ್ದರು. ಇಂದಿನ ಸಭೆಯಲ್ಲಿ ಹಾಜರಿದ್ದ, BWSSB ಸಹಾಯಕ ಅಭಿಯಂತರರಾದ ಶ್ರೀ. ಸುನಿಲ್‌ಕುಮಾರ್ ರವರು ಮಾತನಾಡಿ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಅಧ್ಯಕ್ಷರಿಗೆ ಹಾಗೂ ಸಭೆಗೆ ತಿಳಿಸಿದರು.

ಮು.ತಿ.ನೋ..



Scanned with CamScanner

- ಸಭೆಯಲ್ಲಿ ಹಾಜರಿದ್ದ ಶ್ರೀ. ಜಯರಾಮ್ ಎಂ.ಜಿ ರವರು ಮಾತನಾಡಿ ಸೋಮೇಶ್ವರ ಮುಖ್ಯರಸ್ತೆಯಲ್ಲಿ ಈಗಾಗಲೆ ಬಿಬಿಎಂಪಿ ವತಿಯಿಂದ ಅಂದವಾದ ಪಾದಚಾರಿ ಮಾರ್ಗವನ್ನು ಸುಂದರೀಕರಣಗೊಳಿಸಲಾಗಿದ್ದು, ಈ ಮುಖ್ಯರಸ್ತೆಯಲ್ಲಿ ಈಗಾಗಲೇ ಸಾಕಷ್ಟು ವಹನಗಳು ಎರಡೂ ಬದಿಯಲ್ಲಿ ನಿಂತಿರುವುದರಿಂದ ಪಾಲಿಕೆಯ ವತಿಯಿಂದ ನಿರ್ಮಿಸಿರುವ ಪಾದಚಾರಿ ಮಾರ್ಗ ಸುಂದರತೆ ಕಾಣದಾಗಿರುತ್ತದೆ ಹಾಗೂ ನಿಮಾನ್ಸ್ ತುರ್ತು ಪರಿಸ್ಥಿತಿ ಆಸ್ಪತ್ರೆಗೆ ತೆರಳುವ ಆಂಬುಲೆನ್ಸ್‌ಗಳಿಗೆ ಹಾಗೂ ಸಾರ್ವಜನಿಕರ ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಆದರೆ ಇಂದಿನ ಸಭೆಗೆ ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಗಳು ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ಸ್ಥಳೀಯರಾದ ಶ್ರೀ. ಸುರೇಶ್ ಹೆಚ್.ಕೆ ರವರು ಈ ಸಭೆಯಲ್ಲಿ ಮಾತನಾಡಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ಗುಟ್ಟೇಪಾಳ್ಯದ ಶೆಟ್ಟಿ ಅಂಗಡಿ ಹತ್ತಿರ ಹಾಳಾಗಿರುವ ಸಿ.ಸಿ. ಕ್ಯಾಮರಾಗಳನ್ನು ಸರಿಪಡಿಸಲು ತಿಳಿಸಿದ್ದರು. ಇಂದಿನ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ವಿಭಾಗದ ಸಹಾಯಕ ಅಭಿಯಂತರರಾದ ಶ್ರೀ. ಜಿ .ಮೂರ್ತಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಅಧ್ಯಕ್ಷರು ಸಭೆಗೆ ತಿಳಿಸಿದರು.

- ಸ್ಥಳೀಯರಾದ ಶ್ರೀ. ಸುರೇಶ್ ಹೆಚ್.ಕೆ ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ಡಾ॥. ಬಿ.ಆರ್. ಅಂಬೇಡ್ಕರ್ ಕಾಲೋನಿ ಹಾಗೂ ಸೋಮೇಶ್ವರ ಮುಖ್ಯರಸ್ತೆಯ ನಿಮ್ಹಾನ್ಸ್ ಕಾಂಪೌಂಡ್ ಹತ್ತಿರ ಬಾಗಿರುವ ಕಂಬಗಳನ್ನು ತೆರವುಗೊಳಿಸಲು ಕೋರಿದ್ದರು. ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಕಿರಿಯ ಅಭಿಯಂತರರಾದ ಶ್ರೀ. ವಿಜಯಕುಮಾರ್ ರವರು ಉತ್ತರಿಸಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

- ಸ್ಥಳೀಯರಾದ ಶ್ರೀ. ಸುರೇಶ್ ಹೆಚ್.ಕೆ ರವರು ಮಾತನಾಡಿ ಪಾಂಬೆ ಕ್ವಾಟ್ರಸ್‌ನಲ್ಲಿರುವ ಶ್ರೀ.ಮಾರಮ್ಮ ದೇವಸ್ಥಾನದ ಒಳಗಡೆ ಒಳಚರಂಡಿ ನೀರು ಉಕ್ಕಿ ಬಂದಿರುವುದು ಸಭೆಯಲ್ಲಿ ಚರ್ಚಿಸಿದರು. ಈ ವಿಷಯವಾಗಿ ಇಂದಿನ ಸಭೆಯಲ್ಲಿ ಹಾಜರಿದ್ದ, BWSSB ಸಹಾಯಕ ಅಭಿಯಂತರರಾದ ಶ್ರೀ. ಸುನಿಲ್‌ಕುಮಾರ್ ರವರು ಮಾತನಾಡಿ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಅಧ್ಯಕ್ಷರಿಗೆ ಹಾಗೂ ಸಭೆಗೆ ತಿಳಿಸಿದರು.

- ಸ್ಥಳೀಯರಾದ ಶ್ರೀ. ಅಶೋಕ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಪಾಲಿಕೆಯ ಸ್ವತ್ತುಗಳಾದ ಬಾಸ್ಕೆಟ್ ಬಾಲ್ ಮೈದಾನ, ಹೌಸಿಂಗ್ ಬೋರ್ಡ್ ಕಾಲೋನಿ ಪ್ರದೇಶದ ರಾಜಕಾಲುವೆ ಮತ್ತು ವಾರ್ಡ್ ಕಛೇರಿಯ ಹತ್ತಿರ ಇರುವ ಖಾಲಿ ಚಿಕ್ಕ ಮೈದಾನ ಮತ್ತು ಇತರೆ ಪಾಲಿಕೆಯ ಜಾಗಗಳ ಬಗ್ಗೆ ಪಾಲಿಕೆಯ ಜಾಗಗಳೆಂದು ಗುರುತಿಸಿ ನಾಮಫಲಕ ಅಳವಡಿಸಲು ಕೋರಿದರು. ಅದರಂತೆ ಅಧ್ಯಕ್ಷರು ಉತ್ತರಿಸಿ ಸಹಾಯಕ ಕಂದಾಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಈ ಬಗ್ಗೆ ಕೂಡಲೇ ಕ್ರಮ ವಹಿಸುವಂತೆ ವಾರ್ಡಿ ಸಹಾಯಕ ಅಭಿಯಂತರರಿಗೆ ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ.

- ಸ್ಥಳೀಯರಾದ ಶ್ರೀ. **ಅಶೋಕ್** ರವರು ಮಾತನಾಡಿ ಪಾಲಿಕೆಯ ಜಾಗದಲ್ಲಿ ಈ ಹಿಂದೆ ಮಲ್ಲಿಗೆ ಆಸ್ಪತ್ರೆ ನಿರ್ಮಿಸಿದ್ದು, ಪ್ರಸ್ತುತ ಮಲ್ಲಿನ ಆಸ್ಪತ್ರೆ ಪ್ರಗತಿಯಲ್ಲಿಲ್ಲದಾ ಕಾರಣ ಪಾಲಿಕೆಯ ಯಾವ ಕೆಲಸಗಳಿಗೂ ಪ್ರಯೋಜನವಾಗುತ್ತಿಲ್ಲವೆಂದು ಪ್ರಶ್ನಿಸಿದರು ಹಾಗೂ ಪಿಳೇಕಮ್ಮ ದೇವಸ್ಥಾನದ ಹತ್ತಿರವಿರುವ ಖಾಲಿ ಜಾಗದಲ್ಲಿಯೂ ಯಾವುದೇ ಪಾಲಿಕೆಯ ಕೆಲಸ ನಡೆಯದೇ ಹಾಗೆ ಉಳಿದಿರುವ ಬಗ್ಗೆ ಮಾತನಾಡಿದರು. ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಂದಾಯ ಅಧಿಕಾರಿ ಕಛೇರಿಯ ಕಂದಾಯ ವಸೂಲಿಗಾರರಾದ ಶ್ರೀ. ಆರ್. ರಾಘವೇಂದ್ರ ರವರಿಗೆ ಸದರಿ ಜಾಗಗಳ ಬಗ್ಗೆ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಹಾಜರುಪಡಿಸುವಂತೆ ಸೂಚನೆ ನೀಡಿದರು.

- ಸ್ಥಳೀಯರಾದ ಶ್ರೀ. **ಮಂಜುನಾಥ್** ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದ ಹತ್ತಿರ ಎರಡು ಬೀದಿ ದೀಪಗಳನ್ನು ಅಳವಡಿಸಲು ಮತ್ತೊಮ್ಮೆ ಕೋರಿದ್ದರು. ಇಂದಿನ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ವಿಭಾಗದ ಸಹಾಯಕ ಅಭಿಯಂತರರಾದ ಶ್ರೀ. ಜಿ .ಮೂರ್ತಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಅಧ್ಯಕ್ಷರು ಸಭೆಗೆ ತಿಳಿಸಿದರು..

- ಸ್ಥಳೀಯರಾದ ಶ್ರೀ. **ತೇಜಸ್ ಎ. ಗೌಡ** ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ರಸ್ತೆಗಳಿಗೆ ಪಾಲಿಕೆ ವತಿಯಿಂದ ಸರ್ಕಾರದ ಅಧಿಸೂಚನೆಯಂತೆ ನಾಮಫಲಕಗಳನ್ನು ಅಳವಡಿಸುವಂತೆ ಮತ್ತು ನಾಮಫಲಕಗಳಲ್ಲಿ ಯಾವುದೇ ಲೋಕಸಭಾ/ವಿಧಾನಸಭಾ/ಪಾಲಿಕೆಯ ಸದಸ್ಯರ ಹೆಸರುಗಳನ್ನು ನಮೂದಿಸುವಂತೆ ಕ್ರಮ ವಹಿಸಲು ಕೋರಿದರು. ಈ ವಿಷಯವಾಗಿ ಅಧ್ಯಕ್ಷರು ಮಾತನಾಡಿ ಪಾಲಿಕೆಯ ನಿಯಮಾನುಸಾರ ಕ್ರಮ ವಹಿಸುವಂತೆ ವಾರ್ಡಿನ ಅಭಿಯಂತರರಿಗೆ ಸಭೆಯಲ್ಲಿ ಸೂಚಿಸಿದರು.

- ಸ್ಥಳೀಯರಾದ ಶ್ರೀ. **ತೇಜಸ್ ಎ. ಗೌಡ** ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿರುವ ಉದ್ಯಾನವನ ಮತ್ತು ಕಲ್ಯಾಣಿ ನಿರ್ವಹಣೆಯು ಯಾವ ಇಲಾಖೆಗಳಿಗೆ ಸಂಬಂಧಪಟ್ಟಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸುತ್ತಾ, ವಾರ್ಡ್ ಪ್ರದೇಶದಲ್ಲಿ ಹಲವಾರು ಕಾಮಗಾರಿಗಳ ಪಾಲಿಕೆಯಿಂದ ಸಮರ್ಪಕವಾಗಿ ಪೂರ್ಣಗೊಂಡಿಲ್ಲವೆಂದು ಅಧ್ಯಕ್ಷರಿಗೆ ದೂರನ್ನು ನೀಡಿದರು. ಈ ವಿಷಯವಾಗಿ ಅಧ್ಯಕ್ಷರು ವಾರ್ಡಿನ ಅಭಿಯಂತರರನ್ನು ಪ್ರಶ್ನಿಸಲಾಗಿ ವಾರ್ಡಿನ ಅಭಿಯಂದರು ಉತ್ತರಿಸಿ ವಾರ್ಡಿನಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳು ಸಮರ್ಪಕವಾಗಿ ನಡೆದಿರುತ್ತವೆ ಎಂದು ಸಭೆಗೆ ತಿಳಿಸಿದರು.

- ಸ್ಥಳೀಯರಾದ ಶ್ರೀ. **ಕೆಂಪರಾಜು ಓ.** ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಗುಟ್ಟೇಪಾಳ್ಯದಲ್ಲಿ ಸುಮಾರು 30 ವರ್ಷಗಳ ಹಿಂದೆ ಅಳವಡಿಸಿದ ಒಳಚರಂಡಿ ಕೊಳವೆಗಳನ್ನು ಈವರೆವಿಗೂ ಬದಲಾಯಿಸಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸುತ್ತಾ, ಪಾಲಿಕೆಯ ವತಿಯಿಂದ ಇತರೆ ಕಾಮಗಾರಿಗಳು ಪೂರ್ಣಗೊಳ್ಳುವ ಮುಂಚಿತವಾಗಿ ಒಳಚರಂಡಿ ಕಾಮಗಾರಿಯನ್ನು ತೆಗೆದುಕೊಳ್ಳುವಂತೆ ಮನವಿ ಮಾಡಿದರು. ಈ ವಿಷಯವಾಗಿ ಇಂದಿನ ಸಭೆಯಲ್ಲಿ ಹಾಜರಿದ್ದ, BWSSB ಸಹಾಯಕ ಅಭಿಯಂತರರಾದ ಶ್ರೀ. ಸುನಿಲ್‌ಕುಮಾರ್ ರವರು ಮಾತನಾಡಿ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಅಧ್ಯಕ್ಷರಿಗೆ ಹಾಗೂ ಸಭೆಗೆ ತಿಳಿಸಿದರು.

ಮು.ಪಿ.ನೋ..



Scanned with CamScanner

- ಸಭೆಗ ಹಾಜರಿದ್ದ ವಾರ್ಡಿನ ಅಭಿಯಂತರರು ವ್ಥಳೀಯರು ಹಾಗೂ ಮಾಜಿ ಸದಸ್ಯರು ಕುರಿತು ಮಾತನಾಡಿ ವಾರ್ಡ್ ವ್ಯಾಪ್ತಿಯ ಫಲಾನುಭವಿಗಳಿಗೆ ಪಾಲಿಕೆ ವತಿಯಿಂದ ನೀಡಲಾಗುತ್ತಿರುವ ಒಂಟಿ ಮನೆ ನಿರ್ಮಾಣದ ಅನುದಾನಕ್ಕಾಗಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ/ಆರ್ಥಿಕವಾಗಿ ಹಿಂದುಳಿದ ಹಾಗೂ ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿದ ಫಲಾನು ಭವಿಗಳಾದ ಶ್ರೀಮತಿ. ರೇಣುಕಾ ಅರ್ ಮತ್ತು ಶ್ರೀ. ಎಲ್ ವೆಂಕಟಾಚಲಪತಿ ರವರಿಗೆ ಪ್ರಸ್ತಾವನೆ ಮೇಲಾಧಿಕಾರಿಗಳು ಸಲ್ಲಿಸಲು ಕೋರಿದರು. ಈ ವಿಷಯವಾಗಿ ಸಭೆಯಲ್ಲಿ ಎಲ್ಲರೂ ಒಮ್ಮತ ವ್ಯಕ್ತ ಪಡಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಕಾಮಗಾರಿಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ತಿಳಿಸುವಂತೆ ಹಾಗೂ ಕಾಮಗಾರಿ ನಡೆಯುವ ಸ್ಥಳದಲ್ಲಿ ಸುರಕ್ಷತಾ ಕ್ರಮಗಳನ್ನು ವಹಿಸುವಂತೆ ತಿಳಿಸುತ್ತಾ, ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| (ಆರ್. ಕೊಟ್ರೇಶ್‌ನಾಯಕ್) | ([illegible]) 06/02/21 |
| ಕಾರ್ಯದರ್ಶಿ | ನೋಡಲ್ ಅಧಿಕಾರಿ |
| ವಾರ್ಡ್-144 ಸಿದ್ದಾಪುರ | ವಾರ್ಡ್-144 ಸಿದ್ದಾಪುರ |



Scanned with CamScanner